ಒಳನಾಡು ಮೀನುಗಾರಿಕೆ

417 (956) ಡಾ:ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಿಜಾಪುರ ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ.

(ಆ) ಇಂಡಿ ಮತಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರರ ಸಂಘಗಳ ಹೆಸರೇನು; ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡ ಮೀನುಗಾರರ ಸಂಖ್ಯೆ ಎಷ್ಟು;

(ಇ) ಇಂಡಿ ಮತಕ್ಷೇತ್ರದಲ್ಲಿ ಯಾವ ಯಾವ ಕೆರೆಗಳಲ್ಲಿ ಮೀನುಗಾರಿಕೆಗೆ ಅವಕಾಶ ಮಾಡಿಕೊಡಲಾಗಿದೆ;

(ಈ) ವೃತ್ತಿನಿರತ ಮೀನುಗಾರರಿಗೆ ಯಾವ ಯಾವ ಸೌಲಭ್ಯಗಳನ್ನು ಸರ್ಕಾರವು ಒದಗಿಸಿದೆ?

ಶ್ರೀ ಆನಂದ ವಸಂತ ಆಸ್ನೋಟಿಕರ್ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

(ಅ) ಬಿಜಾಪುರ ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಈ ಕೆಳಕಂಡ ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದೆ.

1) ಬಾವಿ ಮತ್ತು ಹೊಂಡಗಳಲ್ಲಿ ಮೀನುಮರಿ ಬಿತ್ತನೆಗೆ ಸಹಾಯ.

2) ಮೀನುಮರಿ ಉತ್ಪಾದನೆ, ಸಾಕಾಣಿಕೆ ಹಾಗೂ ಹಂಚಿಕೆ.

3) ಮೀನುಗಾರರ ಸಹಕಾರ ಸಂಘಗಳಿಗೆ ಸಲಕರಣೆ ಖರೀದಿಸಲು ಶೇ. 33 ರಷ್ಟು ಸಹಾಯಧನ ನೀಡುವುದು.

4) ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಶೇ. 50ರಷ್ಟು ಸಹಾಯಧನ ಯೋಜನೆ ಅಡಿ ಮೀನುಗಾರರಿಗೆ ಮೀನು ಮಾರಾಟ ಸಲಕರಣೆ ಖರೀದಿಗೆ ಸಹಾಯ.

5) ಮೀನುಗಾರರ ಅಗತ್ಯ ವಸ್ತುಗಳ ಖರೀದಿಗಾಗಿ ಮೀನುಗಾರರ ಸಹಕಾರಿ ಸಂಘಗಳಿಗೆ ಸಾಲ ನೀಡುವುದು.

6) ಮಹಿಳಾ ಸ್ವಾವಲಂಬನೆ ಯೋಜನೆಯಡಿ ಮಹಿಳಾ ಮೀನುಗಾರರಿಗೆ ಮೀನು ಮಾರಾಟಕ್ಕಾಗಿ ಆವರ್ತಕ ನಿಧಿ ನೀಡುವುದು.

7) ವೃತ್ತಿಪರ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳ ಕಿಟ್ ವಿತರಿಸುವುದು.

8) ಮೀನುಮರಿ ಖರೀದಿಗೆ ಸಹಾಯಧನ ನೀಡುವುದು.

9) ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ — ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರಿಗೆ ಅಗತ್ಯ ಸಲಕರಣೆ ಖರೀದಿಗೆ ಸಹಾಯಧನ ನೀಡುವುದು

ಆ) ಇಂಡಿ ಮತಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರರ ಸಹಕಾರ ಸಂಘಗಳ ಹೆಸರು

1) ಮೀನುಗಾರರ ಸಹಕಾರ ಸಂಘ ನಿ., ಇಂಡಿ
2) ಮೀನುಗಾರರ ಸಹಕಾರ ಸಂಘ ನಿ., ಅಥರ್ಗಾ
3) ಮೀನುಗಾರರ ಸಹಕಾರ ಸಂಘ ನಿ., ಗುಂದವಾನ
4) ಮೀನುಗಾರರ ಸಹಕಾರ ಸಂಘ ನಿ., ಚಡಚಣ
5) ಮೀನುಗಾರರ ಸಹಕಾರ ಸಂಘ ನಿ., ಅಣಚಿ
6) ಮೀನುಗಾರರ ಸಹಕಾರ ಸಂಘ ನಿ., ಚಣೇಗಾಂವ
7) ಮೀನುಗಾರರ ಸಹಕಾರ ಸಂಘ ನಿ., ಶಿರವಾಳ

ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡ ಮೀನುಗಾರರ ಒಟ್ಟು ಸದಸ್ಯರ ಸಂಖ್ಯೆ 550.

ಇ) ಇಂಡಿ ಮತಕ್ಷೇತ್ರದಲ್ಲಿ ಈ ಕೆಳಕಂಡ ಕೆರೆಗಳಲ್ಲಿ ಮೀನುಗಾರಿಕೆಗೆ ಅವಕಾಶ ಮಾಡಿಕೊಡಲಾಗಿದೆ.

1. ಸಂಗೋಕಿ ಕೆರೆ
2. ಲೋಣಿ ಕೆರೆ
3. ರಾಜನಾಳ ಕೆರೆ
4. ಹೋರ್ತಿ ಕೆರೆ
5. ಕೋಳುರಗಿ ಕೆರೆ
6. ನಿಂಬಾಳ ಕೆರೆ
7. ಗುಂದವಾನ ಕೆರೆ ನಂ.1
8. ಗುಂದವಾನ ಕೆರೆ ನಂ.2
9. ಗೋಡಿಹಾಳ ಕೆರೆ
10. ಚಡಚಣ ಕೆರೆ
11. ತೇಗಿನಾಳ ಕೆರೆ
12. ಹಂಜಗಿ ಕೆರೆ
13. ಜಿಗಜಿಣಗಿ ಕೆರೆ
14. ನಂದರಗಿ ಕೆರೆ
15. ತಡವಲಗ ಕೆರೆ
16. ಜಿಗಜಿಣಗಿ ಸೈಟ್–2
17. ಬಬಲಾದ ಕೆರೆ
18. ಅಜತನಾಳ ಕೆರೆ

(ಈ)(1) ಮೀನುಗಾರರ ಸಹಕಾರ ಸಂಘಗಳಿಗೆ ಕೆರೆಗಳನ್ನು ಗುತ್ತಿಗೆ ನೀಡಿ ಹಾಗೂ ಭೀಮಾ ನದಿಭಾಗದಲ್ಲಿ 70 ಮೀನುಗಾರರಿಗೆ ಪರವಾನಿಗೆ ನೀಡಿ ಮೀನುಗಾರಿಕೆ ಕೈಗೊಳ್ಳಲು ಅವಕಾಶ ನೀಡಲಾಗಿದೆ.

(2) ಖಾಸಗಿ ಬಾವಿ ಮತ್ತು ಹೋಂಡಗಳನ್ನು ಹೊಂದಿದ ರೈತರಿಗೆ ತಲಾ 250 ಮೀನುಮರಿಗಳನ್ನು ಉಚಿತವಾಗಿ 90 ಜನರಿಗೆ ವಿತರಿಸಲಾಗಿದೆ.

(3) ಮೀನುಗಾರರಿಗೆ ಅಗತ್ಯ ವಸ್ತುಗಳ ಖರೀದಿಗೆ ಶೇ. 33 ರಷ್ಟು ಸಹಾಯಧನವನ್ನು 23 ಫಲಾನುಭವಿಗಳಿಗೆ ನೀಡಲಾಗಿದೆ.

(4) ಮೀನುಮಾರುಕಟ್ಟೆ ಮತ್ತು ಮತ್ಸ್ಯವಾಹಿನಿ ಯೋಜನೆಯಡಿ ಶೇ.50 ರಷ್ಟು ಸಹಾಯಧನವನ್ನು 16 ಜನ ಫಲಾನುಭವಿಗಳಿಗೆ ನೀಡಲಾಗಿದೆ.

(5) ಅಗತ್ಯ ವಸ್ತುಗಳ ಖರೀದಿಗಾಗಿ ಮೀನುಗಾರರ ಸಹಕಾರ ಸಂಘದ ಮೂಲಕ 12 ಜನ ಫಲಾನುಭವಿಗಳಿಗೆ ತಲಾ 2000 ರಂತೆ ಸಾಲ ನೀಡಲಾಗಿದೆ.

(6) ಮಹಿಳಾ ಸ್ವಾವಲಂಬನೆ ಯೋಜನೆಯಡಿ ಮೀನುಗಾರರ ಸಹಕಾರ ಸಂಘ ನಿ., ಚಡಗಾಂವ್ ಇವರಿಗೆ ರೂ. 20,000/– ಆವರ್ತಕ ನಿಧಿ ನೀಡಲಾಗಿದೆ.

(7) ಮೀನುಮರಿ ಖರೀದಿಗೆ ಸಹಾಯಧನ ಯೋಜನೆಯಡಿ 4 ಮೀನುಗಾರರ ಸಹಕಾರ ಸಂಘಗಳು ಹಾಗೂ 4 ಜನ ಫಲಾನುಭವಿಗಳಿಗೆ ಒಟ್ಟು ರೂ. 61493/– ಸಹಾಯಧನ ವಿತರಿಸಲಾಗಿದೆ.

(8) ವಿಶೇಷ ಘಟಕ ಯೋಜನೆಯಲ್ಲಿ 29 ಜನ ಪರಿಶಿಷ್ಟ ಜಾತಿ ಮೀನುಗಾರ ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆಗಳನ್ನು ವಿತರಿಸಲಾಗಿದೆ.

(9) ಗಿರಿಜನ ಉಪಯೋಜನೆಯಲ್ಲಿ 22 ಜನ ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆಗಳನ್ನು ವಿತರಿಸಲಾಗಿದೆ.

(10) ಮತ್ಸ್ಯಾಶ್ರಯ ಯೋಜನೆ ಅಡಿ 2009–10ನೇ ಸಾಲಿನಲ್ಲಿ 10 ಜನ ಫಲಾನುಭವಿಗಳಿಗೆ ಮನೆಗಳನ್ನು ಮಂಜೂರು ಮಾಡಲಾಗಿದೆ.

ಜಲ ನಿರ್ಮಲ ಯೋಜನೆಯ ಅನುಷ್ಠಾನ

421 (735) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–